ಹೊರಡಿಸಲಾಗಿದೆ.

ಆ) ಈ ಯೋಜನೆಯನ್ನು ಸದ್ಯದಲ್ಲೆ ಜಾರಿಗೊಳಿಸಲಾಗುವುದು.

ಹೂವಿನ ಹಡಗಲಿ ತಾಲ್ಲೂಕಿನ ಕೆರೆಗಳ ಹೂಳೆತ್ತುವ ಕಾಮಗಾರಿ.

3024(3693)

ಶ್ರೀ ಹಾಲಪ್ಪ ಎ.ಬಿ.(ಹಡಗಲಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವ ಬ್ಯಾಂಕ್ ಯೋಜನೆ ಅಡಿಯಲ್ಲಿ ಹೂವಿನ ಹಡಗಲಿ ತಾಲ್ಲೂಕಿನಲ್ಲಿ ಎಷ್ಟು ಕೆರೆಗಳ ಹೂಳೆತ್ತುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ? ಅವು ಯಾವುವು? ಅವುಗಳ ಅಂದಾಜು ವೆಚ್ಚವೆಷ್ಟು?

ಆ) ಕೆರೆಗಳ ಹೂಳೆತ್ತುವ ಕಾರ್ಯವನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಗಳು):

ಅ) ವಿಶ್ವಬ್ಯಾಂಕ್‌ನೊಡನೆ ಸಮಾಲೋಚನೆ ಪ್ರಗತಿಯಲ್ಲಿದೆ. ಆದ್ದರಿಂದ ಜಲ ಸಂವರ್ಧನಾ ಯೋಜನೆಯಡಿಯಲ್ಲಿ ಇನ್ನೂ ನಿರ್ಧರಿಸಿರುವುದಿಲ್ಲ

ಆ) ವಿಶ್ವ ಬ್ಯಾಂಕಿನಿಂದ ಹಣಕಾಸಿನ ನೆರವು ಬಂದ ಕೂಡಲೇ ನಿರ್ಧರಿಸಲಾಗುವುದು.

ಹೂವಿನ ಹಡಗಲಿ ತಾಲ್ಲೂಕಿನ ಕೊಡಗೋಡಲುಮಟ್ಟ ಏತ ನೀರಾವರಿ ಯೋಜನೆ.

3026(3695)

ಶ್ರೀ ಹಾಲಪ್ಪ ಎ.ಬಿ.(ಹಡಗಲಿ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಡಗಲಿ ತಾಲ್ಲೂಕಿನ ಕೊಡಗೋಲು ಮಟ್ಟ ಏತ ನೀರಾವರಿ ಕಾಮಗಾರಿ ಪ್ರಸ್ತಾವನೆಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ದೊರಕಿದೆಯೇ?